ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವೀಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 117/2019

.....................................................................

CW 07
PW 06

| | | |
|---|---|---|
| ಹೆಸರು | : | ಚಂದ್ರಕಾಂತ ನಾಯಕ್ |
| ತಂದೆಯ ಹೆಸರು | : | ರುಕ್ಕಪ್ಪ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಉಪ ವಲಯ ಅರಣ್ಯಾಧಿಕಾರಿ, ಅಂಕೋಲಾ ವಲಯ |
| ವಾಸಸ್ಥಳ | : | ಅಂಕೋಲಾ. |

ದಿನಾಂಕ 23-03-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

2000 ರಿಂದ 2012 ರ ವರೆಗೆ ಜಮಗಾ ವಲಯದಲ್ಲಿ ಅರಣ್ಯ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 29-04-2009 ರಂದು ನಾವು ಜಮಗಾ ಗಸ್ತಿನಲ್ಲಿದ್ದಾಗ ಅಮಗಾ ಗೌಳಿವಾಡದಿಂದ ಒಬ್ಬರು ಜಮಗಾ ಗೌಳಿವಾಡದಿಂದ ಒಬ್ಬರು ನಾಯಿಗಳನ್ನು ತೆಗೆದುಕೊಂಡು ಅರಣ್ಯದಲ್ಲಿ ಉಡ ಭೇಟೆಯಾಡಲು ಹೋಗಿದ್ದಾರೆ ಎಂದು ಭಾತ್ಮಿ ಬಂದಿತು. ನಾವು ಕಚೇರಿಗೆ ಬಂದು ಸಲಕರಣೆಗಳೊಂದಿಗೆ ತೆಗೆದುಕೊಂಡು, ಪಂಚರನ್ನು ಕರೆಯಿಸಿ ಭಾತ್ಮಿ ವಿಷಯ ತಿಳಿಸಿ ಅವರು ಒಪ್ಪಿದ ಮೇರೆಗೆ ಸಲಕರಣೆಗಳೊಂದಿಗೆ ನಾಗಜರಿ ಕೊಳ್ಳಕ್ಕೆ ಹೋಗುವ ರಸ್ತೆಯ ಬಳಿ ಹೋಗಿ ಕಾದು ಕುಳಿತೆವು. ಆಗ ಮಧ್ಯಾಹ್ನ 03-00 ಗಂಟೆಯಾಗಿತ್ತು. ಸಂಜೆ 06-00 ರ ಸಮಯದಲ್ಲಿ ಮೊದಲು ಎರಡು ನಾಯಿಗಳು ಮತ್ತು ಅವುಗಳ ಹಿಂದೆ ಇಬ್ಬರು ಜನರು ಬಂದರು. ಅವರನ್ನು ನಾವು ಸುತ್ತುವರೆದು ಹಿಡಿದೆವು. ಅವರ ಬಳಿ ಒಂದು ಕೊಡಲಿ ಮತ್ತು ಗಂಟು ಕಟ್ಟಿದ ಟವೆಲ್ ಇದ್ದವು. ಟವಲ್ ನಲ್ಲಿ ಏನು ಇದೆ ಎಂದು ಕೇಳಿದಾಗ ಅವರು ಗಾಬರಿಗೊಂಡು ಏನು ಇಲ್ಲ ಎಂದು ಹೇಳಿದರು. ಅವರಿಗೆ ಟವಲ್ ಅನ್ನು ತೆಗೆದು ತೋರಿಸಿ ಎಂದು ಕೇಳಿದಾಗ ಅವರು ಅದನ್ನು ತೆರೆದು ತೋರಿಸಿದಾಗ ಅದರಲ್ಲಿ ನಾರಿನಿಂದ ಕಟ್ಟಿದ ಜೀವಂತ ಉಡ ಇತ್ತು. ಅದಕ್ಕೆ

ರಕ್ತ ಹತ್ತಿತ್ತು. ಅವರನ್ನು ವಿಚಾರಿಸಿದಾಗ ಅವರು ಉಡದ ನಾಲಿಗೆ ಮತ್ತು ಬಾಲವನ್ನು ಕತ್ತರಿಸಿರುತ್ತೇವೆ ಎಂದು ತಿಳಿಸಿದರು. ಸದರಿ ಉಡವನ್ನು ತಿನ್ನಲು ತೆಗೆದುಕೊಂಡು ಹೋಗುತ್ತಿದ್ದೇವೆ ಎಂದು ಹೇಳಿದರು. ಅದನ್ನು ಎಲ್ಲಿಂದ ತಂದಿದ್ದೀರಿ ಎಂದು ಕೇಳಿದಾಗ ಅವರು ಅಲ್ಲಿಂದ ಅರ್ಧ ಕಿ.ಮೀ ದೂರದಲ್ಲಿರುವ ಸಾಗವಾಣಿ ನೆಡತೋಪಿನಲ್ಲಿ ನಾಯಿಗಳು ಉಡವನ್ನು ಓಡಾಡಿಸಿ ಅದು ಸುಸ್ತಾದ ನಂತರ ಗಿಡ ಏರುತ್ತಿರುವಾಗ ಹಿಡಿದಿರುತ್ತೇವೆ ನೀವು ಬಂದರೆ ತೋರಿಸುತ್ತೇವೆ ಎಂದು ಹೇಳಿದರು. ಅವರ ಜೊತೆ ನಾವು ಹೋದಾಗ ಸಾಗವಾಣಿ ನೆಡತೋಪಿನಲ್ಲಿ ನಾಯಿಗಳು ಉಡವನ್ನು ಓಡಾಡಿಸುತ್ತಿರುವಾಗ ಅದು ಸುಸ್ತಾಗಿ ಗಿಡ ಏರುತ್ತಿರುವಾಗ ಉಡವನ್ನು ಹಿಡಿದೆವು ಎಂದು ಹೇಳಿ ಜಾಗವನ್ನು ತೋರಿಸಿದರು. ಸದರಿ ಮರವನ್ನು ನಾವು ಪಂಚರ ಸಮಕ್ಷಮ ಗುರುತು ಮಾಡಿದೆವು. ನಂತರ ಉಡವನ್ನು ಅಳತೆ ಮಾಡಿದಾಗ ಅದು 104 ಸೆಂ.ಮೀ ಉದ್ದ ಮತ್ತು ಹೊಟ್ಟೆಯ ಭಾಗ 28 ಸೆ.ಮೀ ಇತ್ತು ಹಾಗೂ ಅಂದಾಜು 1 ವರೆ ಕೆ ಜಿ ತೂಕ ಇತ್ತು. ಆರೋಪಿತರ ಬಳಿ ಇದ್ದ ಕೊಡಲಿ ಮತ್ತು ಟವೆಲ್ ಗಳನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡೆವು. ಆರೋಪಿತರಿಗೆ ತಮ್ಮ ಹೆಸರನ್ನು ಕೇಳಲಾಗಿ ಅವರು ತಮ್ಮ ಹೆಸರನ್ನು ನಿನ್ನು ಧೂಳು ಪೊಂಡೆ, ಸಾಃ ಜಮಗಾ ಮತ್ತು ಬಾಬು ಮುಡು ಜೋರೆ, ಸಾಃ ಅಮಗಾ ಎಂದು ತಿಳಿಸಿದರು. ಸದರಿ ಜಾಗ ಎಲ್ಲಿ ಬರುತ್ತದೆ ಎಂದು ಹಾತ್ ನಕಾಶೆಯನ್ನು ನೋಡಲಾಗಿ ಅದು ಬ್ಲಾಕ್ ನಂಬರ 4 ಕಂ.ನಂಬರ 4 ರಲ್ಲಿ ಬರುತ್ತದೆ ಎಂದು ಗೊತ್ತಾಯಿತು. ಅದರ ಚಕ್ಕು ಬಂದಿ ಪೂರ್ವಕ್ಕೆ ಅಂಬಿಕಾನಗರ ರಸ್ತೆ, ಪಶ್ಚಿಮಕ್ಕೆ ಅರಣ್ಯ, ಉತ್ತರಕ್ಕೆ ಅರಣ್ಯ ಮತ್ತು ದಕ್ಷಿಣಕ್ಕೆ ಅರಣ್ಯ ಬರುತ್ತದೆ. ಜಾಗದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಬರೆದೆವು, ಸದರಿ ಪಂಚನಾಮೆ ಮತ್ತು ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 3 ಸಿ ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ. ಪಂಚನಾಮೆಯನ್ನು 07–00 ರಿಂದ 07–40 ರ ವರೆಗೆ ಜರುಗಿಸಿದೆವು. ಆರೋಪಿತರನ್ನು ದಸ್ತಗೀರ್ ಮಾಡಿ ಮತ್ತು ಉಡವನ್ನು ತಂದು ನ್ಯಾಯಾಲಯದಿಂದ ಆದೇಶ ಪಡೆದು ದಿನಾಂಕ 02–05–2009 ರಂದು ಉಡವನ್ನು ಪಂಚನಾಮೆ ಜರುಗಿಸಿ ಪಂಚರಾದ ಚಾಸಾ 8 ಮತ್ತು 9 ರವರ ಸಮಕ್ಷಮ ಅರಣ್ಯಕ್ಕೆ ಬಿಟ್ಟೇವು. ಜಪ್ತುಪಡಿಸಿಕೊಂಡ ಕೊಡಲಿಯನ್ನು ಮತ್ತು ಟಾವೆಲ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಪಂಚನಾಮೆ ಮತ್ತು ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ4 ಬಿ ಎಂದು ಗುರುತಿಸಲಾಯಿತು. ಅವುಗಳು ಈಗ ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ಈಗಾಗಲೇ ಮು.ಮಾ. 1 ಮತ್ತು 2 ಎಂದು ಗುರುತಿಸಲಾಗಿದೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಒಬ್ಬರು ಮರಣ ಹೊಂದಿರುತ್ತಾರೆ. ಆರೋಪಿ 1 ರವರು ಈ ದಿನ ಗೈರು ಹಾಜರಿದ್ದು ಅವರನ್ನು ಗುರುತಿಸುವಿಕೆಯ ಬಗ್ಗೆ ಅವರ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ</u>** ಆರೋಪಿತರ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ಚಾಸಾ 1 ರಿಂದ 4 ರವರು ನಿಮ್ಮ ಮೇಲಾಧಿಕಾರಿಗಳು ಎಂದರೆ ಸರಿ. ಚಾಸಾ 5 ಮತ್ತು 7 ರವರು ನಿಮ್ಮ ಇಲಾಖೆಯ ಸಿಬ್ಬಂದಿಗಳು ಎಂದರೆ ಸರಿ. ಭಾತ್ಮಿ ಚಾಸಾ 5 ರವರಿಗೆ ಬಂದಿತ್ತು, ಆಗ ನಾವು ಅವರ ಜೊತೆ ಇದ್ದೇವು. ಆಗ ಸಮಯ 01-45 ಆಗಿತ್ತು. ಅಮಗಾ ಗ್ರಾಮ ಮತ್ತು ಜಮಗಾ ಗ್ರಾಮ ಬೇರೆ ಬೇರೆ ಎಂದರೆ ಸರಿ. ಅಮಗಾ ಗ್ರಾಮ ಮತ್ತು ಜಮಗಾ ಗ್ರಾಮದಿಂದ ನಾಗರ್ಝರಿಕೊಳ್ಳ ಅಂದಾಜು 1 ರಿಂದ 2 ಕಿ.ಮೀ ಆಗಬಹುದು ಎನ್ನುತ್ತಾರೆ. ಘಟನಾ ಜಾಗದಿಂದ ಅಂಬಿಕಾನಗರಕ್ಕೆ ನಡೆದುಕೊಂಡು ಬಂದೆವು. ಚಾಸಾ 8 ಮತ್ತು 9 ರವರು ಅಮಗಾ ಮತ್ತು ಜಮಗಾ ಗ್ರಾಮದವರು ಎಂದರೆ ಸರಿ. ನಮ್ಮ ಕಚೇರಿಯಿಂದ ಘಟನಾ ಜಾಗಕ್ಕೆ ಮೂರು ಬೈಕಗಳ ಮುಖಾಂತರ ಹೋದೆವು. ಮರದ ನಾರನ್ನು ಪಂಚನಾಮೆಯ ಸಮಯದಲ್ಲಿ ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿ. ಉಡದ ನಾಲಿಗೆ ಎಷ್ಟು ಉದ ಹರಿದಿತ್ತು ಎಂದು ಪರಿಶೀಲನೆ ಮಾಡಿಲ್ಲ. ಉಡದ ಬಾಲ ಎಷ್ಟು ಇಂಚು ಕತ್ತರಿಸಲಾಗಿತ್ತು ಎಂದು ಪರಿಶೀಲನೆ ಮಾಡಿಲ್ಲ. ಉಡಕ್ಕೆ ಪಶು ವೈದ್ಯಾಧಿಕಾರಿಗಳಿಂದ ಚಿಕಿತ್ಸೆ ಕೊಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಜಪ್ತುಪಡಿಸಿಕೊಂಡ ಟಾವೆಲ್ ನ ಅಳತೆ ಹೇಳಲು ಆಗುವುದಿಲ್ಲ. ಪಂಚರ ಸಮಕ್ಷಮ ಕೊಡಲಿಯ ಕಾವನ್ನು ತನಿಖಾಧಿಕಾರಿ ಜಪ್ತುಪಡಿಸಿಕೊಂಡಿಲ್ಲ. ಸಾಗವಾಣಿ ಮರದ ಸುತ್ತಳತೆಯನ್ನು ಪರಿಶೀಲನೆ ಮಾಡಿರುತ್ತೇವೆ. ಸಾಗವಾಣಿ ಮರದ ಸುತ್ತಳತೆ 0.73 ಸೆಂ.ಮೀಟರ್ ಇತ್ತು. ಅದನ್ನು ಪಂಚನಾಮೆಯಲ್ಲಿ ಬರೆದಿರುತ್ತೇವೆ. ಸಾಗವಾಣಿ ಮರದ ಸುತ್ತಳತೆಯನ್ನು ನಿಮ್ಮ ಹೇಳಿಕೆಯಲ್ಲಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಘಟನಾ ಜಾಗದಿಂದ ಸಾಗವಾಣಿ ನೆಡತೋಪು 1 ಕಿ.ಮೀ ದೂರದಲ್ಲಿ ಇತ್ತು. ಮು.ಮಾ. ಗಳ ಮೇಲೆ ನಿಮ್ಮ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವುದೇ ಘಟನೆ ನಡೆದಿಲ್ಲ, ಆರೋಪಿ 1 ರವರು ಯಾವುದೇ ತಪ್ಪು ಮಾಡಿಲ್ಲ, ಪಂಚರ ಮತ್ತು ನಿಮ್ಮ ಸಮಕ್ಷಮ ಯಾವುದೇ ಮ.ಮಾ.ಗಳನ್ನು ಜಪ್ತುಪಡಿಸಿಕೊಂಡಿಲ್ಲ ಮತ್ತು ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಇಲಾಖೆಯ ಅಂಕಿ ಸಂಖ್ಯೆಗೋಸ್ಕರ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ 1 ರವರು ಸಲ್ಲಿಸಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಘಟನಾ ಜಾಗವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಘಟನೆಯ ನಡೆದ ಸಮಯದಲ್ಲಿ ಅಮಗಾ ಪಶ್ಚಿಮ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೀರಿ ಎಂದರೆ ಸರಿ. ಜಮಗಾ ಪಶ್ಚಿಮ ನಿಮ್ಮ ಕಾರ್ಯವಾಪ್ತಿಗೆ ಬರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.